**ದಿನಾಂಕಃ 11/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಡಿಹೆಚ್‌ಆರ್ ಪರ ಶ್ರೀ ಕೆ.ಎ.ಎಸ್ ವಕೀಲರಿಂದಃ**

1. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ತಾಯಿಯ ಹೆಸರು ಯಶೋಧಮ್ಮ. ಸರ್ವೆ ನಂ.30ರ ಜಮೀನು ನನ್ನ, ನನ್ನ ತಾಯಿ ಮತ್ತು ರವಿ ಯವರ ಜಂಟಿ ಖಾತೆಯಲ್ಲಿದೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿಲ್ಲ, ಆದರೆ ನನ್ನ ತಾಯಿ ಮತ್ತು ಅಣ್ಣನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಸರ್ವೆ ನಂ.30ರಲ್ಲಿ ನಮ್ಮ ಹೆಸರಿನಲ್ಲಿ 1 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನಿನ ಪೈಕಿ 1 ಎಕರೆ 1 ಗಂಟೆ ಜಮೀನು ಕಾಲುವೆಗೆಂದು ಸ್ವಾಧೀನ ಪಡೆದಿದ್ದಾರೆಂದು ನುಡಿಯುತ್ತಾರೆ. ಸದರಿ ಸ್ವಾಧೀನಪಡಿಸಿಕೊಂಡ ದಾಖಲಾತಿ ನ್ಯಾಯಾಲಯಕ್ಕೆ ನೀಡಿಲ್ಲ. ಸದರಿ ಜಮೀನು ನಮ್ಮ ಹೆಸರಿಗೆ ಪೌತಿ ಖಾತೆಯಾಗಿದೆ ಎಂದರೆ ಸರಿ. ಅದು ಒಟ್ಟು ಕುಟುಂಬದ ಜಮೀನು ಎಂದರೆ ಸರಿ. ಅದು ಎಷ್ಟು ಬೆಲೆ ಬಾಳುತ್ತದೆ ಎಂದರೆ ಈಗ ಕಾಲುವೆಗೆ ಸ್ವಾಧೀನಪಡಿಸಿದ್ದರಿಂದ ಅದು ಬೆಲೆ ಬಾಳುವುದಿಲ್ಲವೆಂದು ನುಡಿಯುತ್ತಾರೆ. ಈ ವರ್ಷ ಸದರಿ ಜಮೀನಿನಲ್ಲಿ ರಾಗಿ ಬೆಳೆದಿದ್ದೇವೆ. ಈ ವರ್ಷ ಕುಂಬಳ, ಶುಂಠಿ, ಗೆಣಸು, ಹೊಗೆಸೊಪ್ಪು ಬೆಳೆದಿದ್ದೇವೆ ಎಂದರೆ ಸರಿಯಲ್ಲ. ಚನ್ನಕಲ್ಲುಕಾವಲು ಗ್ರಾಮದ ಅಕ್ಕಪಕ್ಕ ನಿವೇಶನಗಳು ಆಗಿದೆ ಎಂದರೆ ಆಗಿಲ್ಲ ಎಂದು ನುಡಿಯುತ್ತಾರೆ.

2. ಅಂಬಲಾರೆ ಗ್ರಾಮದ ಸರ್ವೆ ನಂ.34/1ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ 12 ಗುಂಟೆ ಜಮೀನು ಇದೆ ಎಂದರೆ ಸರಿ. 2019ರಲ್ಲಿ ಸದರಿ ಜಮೀನಿನ ಖಾತೆ ನನ್ನ ತಾಯಿಯ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ಅದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಅದು ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ, ಹಾಜರುಪಡಿಸುತ್ತೇನೆ. ನಿಪಿ.5ರಲ್ಲಿ ಕಾಣಿಸಿರುವ ಮನೆ ಸದರಿ ಜಮೀನಿನಲ್ಲಿದೆ ಎಂದರೆ ಸರಿ. ಅದರಲ್ಲಿ 13×13 ಅಳತೆಯ ಬ್ಯಾರೇನ್ ಇದೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿ ಬ್ಯಾರೇನ್ ಇಲ್ಲ, ಆದರೆ ಬ್ಯಾರೇನ್ ಲೈಸೆನ್ಸ್ ಇದೆ.

ನಿಪಿ.7 ರಲ್ಲಿ ನಮೂದಿಸಿರುವಂತೆ ಬ್ಯಾರೇನ್ ಲೈಸೆನ್ಸ್ ಇದೆ ಎಂದರೆ ಸರಿಯಲ್ಲ. ಆದರೆ ಆದು ನವೀಕರಣ ಆಗಿಲ್ಲ ಎಂದು ನುಡಿಯುತ್ತಾರೆ. ಮನೆ ಮಾರಾಟ ಮಾಡಿದರೆ ಎಷ್ಟು ಬೆಲೆ ಇದೆ ಎಂದು ಗೊತ್ತಿಲ್ಲ. ಲೈಸೆನ್ಸ್ ನವೀಕರಣ ಮಾಡಿ ಮಾರಾಟ ಮಾಡಿದರೆ ಎಷ್ಟು ಬೆಲೆ ಇದೆ ಎಂದು ಗೊತ್ತಿಲ್ಲ.

3. ದಿನಗೂಲಿ ಮಾಡಿದರೆ ಒಂದು ದಿನಕ್ಕೆ ₹.500/- ನೀಡುತ್ತಾರೆ. ಆದರೆ ದಿನ ಕೂಲಿ ಕೆಲಸ ಸಿಗುವುದಿಲ್ಲ. ನಾನು ಡ್ರೈವರ್ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಟಾಟಾ ಮ್ಯಾಜಿಕ್ ಎಂಬ ವಾಹನದ ಮಾಲೀಕ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಹೀರೋಹೊಂಡಾ ಮತ್ತು ಬೈಕ್ ಇದೆ ಎಂದರೆ ಸರಿಯಲ್ಲ. ನಾನು ನನ್ನ ವಕೀಲರ ಮುಖಾಂತರ ಸಲ್ಲಿಸಿದಂತಹ ಋಣಮುಕ್ತ ಅರ್ಜಿ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದಂತಹ ಜಮೀನುಗಳು, ಮನೆ, ಬ್ಯಾರೇನ್, ಬ್ಯಾರೇನ್ ಲೈಸೆನ್ಸ್ ವಾಹನಗಳು ಒಟ್ಟು 40-50 ಲಕ್ಷ ಬೆಲೆ ಬಾಳುತ್ತವೆ ಎಂದರೆ ಸರಿಯಲ್ಲ. ನಾನು ಹಾಲನ್ನು ಡೈರಿಗೆ ನೀಡುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್.ಎಫ್ ಜಾತಿಯ 6 ಹಸುಗಳನ್ನು ಹೊಂದಿದ್ದು, ಅವು ದಿನಕ್ಕೆ ತಲಾ 25 ಲೀಟರ್ ಹಾಲು ನೀಡುತ್ತವೆ ಎಂದರೆ ಸರಿಯಲ್ಲ. ಅದರಿಂದ ನನಗೆ ದಿನಕ್ಕೆ ₹.800-900 ಆದಾಯ ಇದೆ ಎಂದರೆ ಸರಿಯಲ್ಲ. ನಾನು ಮದುವೆಯಾಗಿ 2 ವರ್ಷ ಕಳೆದಿದೆ. ನನಗೆ ಮತ್ತು ನನ್ನ ತಾಯಿಗೆ ಬೆಲೆ ಬಾಳುವ ಆಸ್ತಿ ಮತ್ತು ಚಿನ್ನ ಇದೆ ಎಂದರೆ ಸರಿಯಲ್ಲ. ತೀರ್ಪುದಣಿಗೆ ತೀರ್ಪಿನ ಹಣ ನೀಡಬೇಕೆಂದು ನನಗೆ ಆಸ್ತಿ ಇಲ್ಲ ಮತ್ತು ಆದಾಯ ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ₹.2,23,145/- ಮತ್ತು ಬಡ್ಡಿ ಹಣವನ್ನು ಕೊಡಲು ಶಕ್ತನಾಗಿದ್ದೇನೆ ಎಂದರೆ ಸರಿಯಲ್ಲ. ಚನ್ನಕಲ್ಲುಕಾವಲು ಗ್ರಾಮದ ಜಮೀನು 20-30 ರೂಪಾಯಿ ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಅದರ ಸುತ್ತಮುತ್ತಾ ನಿವೇಶನ ಮಾಡಿದ್ದರೂ ಸಹ ಮರೆಮಾಚಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಬೆಳೆದ

ಹೊಗೆಸೊಪ್ಪಿನಿಂದ ವಾರ್ಷಿಕ 3–4 ಲಕ್ಷ ಆದಾಯ ಗಳಿಸುತ್ತೇವೆ ಎಂದರೆ ಸರಿಯಲ್ಲ. ಸಾಲ ಮರುಪಾವತಿಸುವುದನ್ನು ತಪ್ಪಿಸಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**